International Journal of Kannada Research
www.kannadajournal.com

ISSN: 2454–5813
IJSR 2015; 1(1): 05-06
© 2015 IJKS
www.kannadajournal.com
Received: 19-06-2015
Accepted: 20-07-2015

**Dr.Seema Patil,**
Assistant Professor, Dept. Of Music, Godutai Doddappa Appa Degree College for Women, S.B. Temple Road, Brahampur, Kalaburagi, Karnataka-585103.

**Correspondence**
**Dr.Seema Patil**
Assistant Professor, Dept. Of Music, Godutai Doddappa Appa Degree College for Women, S.B. Temple Road, Brahampur, Kalaburagi, Karnataka-585103.

# ಠುಮ್ರಿ ಸಂಗೀತ ಮತ್ತು ಅದರ ವಿಕಾಸ

**Dr.Seema Patil.**

ಠುಮ್ರಿಯು ನೃತ್ಯ ಸಂಗೀತದ ಒಂದು ಪ್ರಕಾರವಾಗಿದ್ದು ಅಭಿನಯವು ಇದರ ಅವಿಭಾಜ್ಯವಾದ ಅಂಗವಾಗಿದೆ. ಠುಮ್ರಿ ಸಂಗೀತವು ವಿಶೀಷವಾಗಿ ನರ್ತಕಿಯರಿಂದ ಅಧಿಕರಿಂದ ಬಂಧರಿಂದ ಪ್ರಯೋಗಿಸಲ್ಪಡುತ್ತಿತ್ತು. ನರ್ತಕಿಯರಿಂದ ವಿವಿಧ ಕಥಾ ರೂಪಕಗಳು ನೃತ್ಯ ಮಾಧ್ಯಮವಾಗಿ ಪ್ರಯೋಗಿಸಲ್ಪಡುತ್ತಿದ್ದವು. ಕಥಿಕ ಎಂದರೆ ಹೇಳುವವ, ಕಥೆ ಎಂದರೆ ನಿರೂಪಿಸುವವ ಎಂಬರ್ಥ. ಕಥಾ ಅಥವಾ ಕತೇಚು ಶಬ್ದಕ್ಕೆ ಯಾವ ಬಗೆಯ ಸಂಬಂಧವೂ ಇಲ್ಲ. ಭಂದ ಶಬ್ದವು ಹಾಸ್ಯಗಾರ ಎಂದಿದ್ದು "ಭಂದ" ಕಿ ಧಾತುವಿನಿಂದ "ನಗಿಸು" ಉತ್ಪನ್ನವಾಗಿದೆ. ಇವು ಸಂಸ್ಕೃತ ಮೂಲೋತ್ಪತ್ತಿಯನ್ನು ಹೊಂದಿದ್ದು ಠುಮ್ರಿಯ ಈ ನೃತ್ಯ ಸಂಗೀತಕ್ಕೆ ಲಖನೋದ ವಝೀದ ಅಲಿ ಶಹನು ರಾಜಾಶ್ರಯ ನೀಡಿ ಪ್ರೊತ್ಸಾಯಿಸದನೆಂದು ಇತಿಹಾಸಗಳ ಪ್ರಬಂದದಿಂದ ತಿಳಿದು ಬರುತ್ತದೆ. ಈತ ಸ್ವತ: ಉದ್ದಾಮ ಸಂಗೀತಗರನಾಗಿದ್ದಲ್ಲದೇ ಅನೇಕ ಠುಮ್ರಿಗಳ ರಚನೆ ಮಾಡಿದ್ದಾನೆ.

ಕೆಲವು ಜನ ಸಂಗೀತಜ್ಞರ ಅಭಿಪ್ರಾಯದಲ್ಲಿ ಠುಮ್ರಿ ಶಬ್ದವು ಥುಮ ಧಾತುವಿನಿಂದ ಉತ್ಪನ್ನವಾಗಿದ್ದು ಥುಮಿ ಎಂದರೆ " ನರ್ತನದ ಪದಗತಿ" ಎಂಬರ್ಥದಲ್ಲಿದೆ. ಠುಮ್ರಿ ಶಬ್ದದ ಉತ್ಪತ್ತಿ ಏನೇ ಆಗಿದ್ದರೂ ಅದು ಮೂಲತ: ನೃತ್ಯ ಮತ್ತು ಅಭಿನಯದ ಅಂಗ ಅಂಶಗಳನ್ನು ಒಳಗೊಂಡಿದೆ. ಠುಮ್ರಿಯಲ್ಲಿ ಎರಡು ಪ್ರಕಾರಗಳಿವೆ.

1) ಬೋಲ್ ಬಾಂಟಕಿ ಅಥವಾ ಬಂದಕಿ ಠುಮ್ರಿ

2) ಬೋಲ್ ಬನಾವೊಂಕಿ.

ಬೋಲ್ ಬನಾವೊಂಕಿ ಠುಮ್ರಿಯು ನೃತ್ಯಾಂತರ್ಗತವಾಗಿದ್ದು ಇದರ ಸೌಂದರ್ಯವು ಲಯದ ವೈವಿಧ್ಯತೆ ಸ್ವರಗಳ ನೆಗೆತ ( ಂಝುಟ್ಕಾ ) ಮತ್ತು ಶಬ್ಧೋಚ್ಚಾರಗಳಲ್ಲಿ ಅಡಗಿದೆ ಈ ಠುಮ್ರಿಯನ್ನು ಓರ್ವ ಅಥವಾ ಹೆಚ್ಚುಜನ ಹಿನ್ನೆಲೆಯ ಸಂಗೀತಗಾರರಿಂದ ಮಧ್ಯ ಅಥವಾ ಧ್ರುತ್ ಲಯದಲ್ಲಿ ಹಾಡುತ್ತಾರೆ.

ಬೋಲ್ ಬಾಂಟಕಿ ಠುಮ್ರಿಯು ನೃತ್ಯದ ಪದಗತಿಯೊಂದಿಗೇನೇ ಪ್ರಾರಂಭಗೊಳ್ಳುತ್ತದೆ. ಬೋಲ್ ಬನಾವೊಂಕಿ ಠುಮ್ರಿಯು ನೃತ್ಯದ ಒಂದು ಅಂಗವು ಇಲ್ಲಿ ನೃತ್ಯದ ಒಂದು ಅಂಗ ಮುಗಿಯುತ್ತಲೂ ಠುಮ್ರಿಯು ಪ್ರಾರಂಭಗೊಂಡರೂ. ಅಭಿಪ್ರಾಯವು ಮಾತ್ರ ಹಾಗೆಯೇ ನಡೆದೇ ಇರುತ್ತದೆ. ಈ ಠುಮ್ರಿಯು ಧ್ರತ್ ಅಥವಾ ಮಧ್ಯಲಯದಲ್ಲಿ ಹಾಡಲ್ಪಡುತ್ತಿದ್ದು. ಬೋಲ್ ಬಾಂಟಕಿ ಠುಮ್ರಿಯು ವಿಲಂಬಿತ ಲಯದಲ್ಲಿತುರತ್ತದೆ. ಇದರಲ್ಲಿ ಕೊನೆಯವರೆಗೂ ಅಭಿನಯಕ್ಕೆ ಅವಕಾಶವಿದ್ದು ಬೋಲ್ ಬನಾವೊಂಕಿ ಠುಮ್ರಿಯನ್ನು ನೃತ್ಯದ ಕೊನೆಯ ಹಂತದಲ್ಲಿ ಹಾಡಲ್ಪಡುತ್ತಿದ್ದು ತಬಲಾದಲ್ಲಿ ಲಗ್ಗಿ ಪ್ರಾರಂಭವಾಗುತ್ತಲೂ ಲಯದ ಗತಿಯು ತೀವ್ರವಾಗಿ ಧ್ರತ್ ಲಯದಲ್ಲಿರುತ್ತದೆ. ಈ ಹಂತದಲ್ಲಿ ತಬಲಾ ಕಲಾವಿದನ 'ಲಗ್ಗಿ' ಯು ದ್ರುತ್ ಗತಿಯಲ್ಲಿ ಪದಗತಿ, ಕಾವ್ಯದ ಶಬ್ದೋಚ್ಚಾರ ಮತ್ತು ತಾಲಲಯದ ಸೌಂದರ್ಯಕ್ಕೆ ಹೆಚ್ಚಿನ ಮೆರಗು ನೀಡಿ ಕೇಳುಗರನ್ನು ಮಂತ್ರಮುಗ್ಧರನ್ನಾಗಿಸುತ್ತದೆ.

ಧ್ರುಪದ ಮತ್ತು ಖ್ಯಾಲ ಗಾಯನ ಸ್ವರ್ ಪ್ರಧಾನವಾಗಿದ್ದು ಗಾಯನದಲ್ಲಿ ಸ್ವರಕ್ಕೆ ಪ್ರಥಮ ಪ್ರಾಶಸ್ತ್ಯವಿದ್ದು ಚೀಜಿನ ಶಬ್ದಗಳಿಗೆ ಎರಡನೇಯ ಸ್ಥಾನವಿದೆ. ಠುಮ್ರಿಯ ಬೋಲ್ ಪ್ರಧಾನಗಾಯನವಾಗಿದ್ದು ಇಲ್ಲಿ ಚೀಜಿನ ಶಬ್ದಗಳಿಗೆ ಬಹು ಮಹತ್ವದ ಸ್ಥಾನವಿದ್ದು ಈ ಗಾಯಕಿಯಲ್ಲಿ ಸ್ವರಗಳ ಪ್ರಯೋಗವು ಖಟ್ಕಾ, ಮುರ್ಖಿ ಮೀಂಡಗಳಂತಹ ಚಿತ್ತಾಕರ್ಷಕ ಸ್ವರ ಪ್ರಯೋಗಗಳಿಂದ ಕೂಡಿದ್ದು ಉಚಿತ ಸ್ವರಯುಕ್ತ, ಭಾವರಸ ಪೂರ್ಣವಾದ ಶಬ್ದೋಚ್ಚಾರದಿಂದ ಚೀಜಿನ ರಸಭಾವವು ಬೆಳಗುತ್ತದೆ. ಚೀಜಿನ ಗುಣಧರ್ಮವು ಠುಮ್ರಿ ಗಾಯನದ ರಾಗರಸವನ್ನು ನಿರ್ಧರಿಸುವುದು. ಈ ವಿಷಯದಲ್ಲಿ ಝುಟ್ಕಾ, ಖಟ್ಕಾ ಗಿಟಕರಿ, ಭೇಂಡ, ದರ್ದ ಈ ಸಂಗತಿಗಳು ಬಹು ಮಹತ್ವವಾದ ಪಾತ್ರವನ್ನು ನಿರ್ವಹಿಸುತ್ತದೆಯಲ್ಲದೆ ಗಮಿಕ, ಕಾಕುಗಳು ಠುಮ್ರಿ ಗಾಯನದ ಸೌಂದರ್ಯ ವರ್ಧನೆಯ ಅಂಶಗಳಾಗಿವೆ. ಈ ಠುಮ್ರಿ ಶೈಲಿಯಲ್ಲಿಯ ಹಾಡಿನ ರಸಭಾವವು ಸಾಮಾನ್ಯವಾಗಿ ದೋಹಾ, ಶೇರ್ , ಕವಿತಾಗಳಂತೆಯೇ ಚಿತ್ತಾಕರ್ಷಕವಾಗಿರುತ್ತದೆ.

ಹೀಗೆ ಠುಮ್ರಿಗಾಯನವು ನೃತ್ಯ ಮತ್ತು ಅಭಿನಯಗಳನ್ನೊಳಗೊಂಡ ಒಂದು ಭಾವರಸಪೂರ್ಣ ಸಂಗೀತ ಮತ್ತು ಅಭಿನಯಗಳನ್ನೊಳಗೊಂಡ ಒಂದು ಭಾವರಸಪೂರ್ಣ ಸಂಗೀತ ಶೈಲಿಯಾಗಿದೆ. ಸ್ವರ್ಗೀಯ ಪಂ. ವಿಷ್ಣುನಾರಾಯಣ ಭಾತಖಂಡಯವರು ಠುಮ್ರಿಗಾಯನವು ಕೇಳಲಿಕ್ಕೆ ಸುಗಮ ಹಾಗೂ ಚಿತ್ತಾಕರ್ಷಕವಾಗಿದ್ದರೂ ಅದನ್ನು ಹಾಡುವುದು ಕೇವಲ ಸಂಗೀತದಲ್ಲಿ ವಿಶೇಷ ರೀತಿಯ ತರಬೇತಿ ಹೊಂದಿದ ಪರಿಣಿತ ಕಲಾವಿದರಿಗೆ ಮಾತ್ರ ಸಾಧ್ಯವಾದದು ಎಂದು ಅಭಿಪ್ರಾಯಪಟ್ಟಿದ್ದಾರೆ. ಠುಮ್ರಿ ಗಾಯನದಲ್ಲಿ ರಾಗಶುದ್ಧತೆಗೆ ಅವಕಾಶವಿಲ್ಲ. ಸುಮಾರು ೩೦-೪೦ ವರುಷಗಳ ಪೂರ್ವದಲ್ಲಿ ಠುಮ್ರಿ ಗಾಯಕರು ಠುಮ್ರಿಯನ್ನು ನೃತ್ಯಾಭಿಯನಯದೊಂದಿಗೇನೇ ಹಾಡುತ್ತಿದ್ದರು. ಶಂಭು ಮಹಾರಾಜ, ಹಾಗೂ ಶ್ರೀಮತಿ ಸಿದ್ಧೇಶ್ವರಿ ದೇವಿ ಮೊದಲಾದವರು ಅಭಿನಯಪೂರ್ಣವಾಗಿಯೇ ( ಹಿತ ಮಿತವಾಗಿ) ಹಾಡುತ್ತಿದ್ದರು. ಆದರೆ ಬರುಬರುತ್ತ ಈ ಅಭಿಯನ ಅಂಗವು ಪ್ರಚಾರದಲಿ ಬಿದ್ದು ಹೆಚ್ಚಾಗಿ ಠುಮ್ರಿಯನ್ನು ಕೈ ಕಣ್ಣುಗಳ ಹಿತ-ಮಿತ ಹಾವಭಾವಗಳಿಂದ ಭಾವಪೂರ್ಣವಾಗಿ ಹಾಡುವ ಪರಿಪಾಠವು ಪ್ರಚಾರದಲ್ಲಿ ಬಂದು ಅಧುನಿಕ ಗಾಯಕರು ಇದನ್ನೇ ಅನುಸರಿಸಿಕೊಂಡು ಠೂಮ್ರಿಯನ್ನು ಹಾಡುವುದನ್ನು ಕಾಣಬಹುದಾಗಿದೆ.

ಆಧುನಿಕ ಗಾಯಕರು ಠುಮ್ರಿ ಸಂಗೀತದಲ್ಲಡಗಿದ ಭಾವರಸ ಪರಿಪೂರ್ಣವಾದ, ಚಿತ್ತಾಕರ್ಷಕವಾದ ಪರಿಣಾಮಕಾರಣವಾದ ಶೈಲಿಗೆ ಮಾರುಹೋಗಿ ಠುಮ್ರಿ ಗಾಯನದತ್ತ ತಮ್ಮ ಸದಭಿರುಚಿಯನ್ನು ಬೀರುತ್ತಿದ್ದಾರೆ. ರಾಗ ಶುದ್ಧತೆಗೆ ಲಕ್ಷ್ಯಗೊಡದೆ ಠುಮ್ರಿಯ ಧ್ವನಿ ಪೂರ್ಣಶಬ್ದಗಳನ್ನು ಉಚಿತ ಸ್ವರಶ್ರೇಣಿಯೊಂದಿಗೆ ಹೆಣೆದು, ನೃತ್ಯಾಭಿನಯದ ಸಹಾಯ, ಸಹಕಾರಗಳಲ್ಲದೇನೇ ಕೇಳುಗರ ಚಿತ್ತವನ್ನು ಸೂರೆಗೊಳ್ಳುವಲ್ಲಿ ಆಧುನಿಕ ಗಾಯಕರು ಸಮರ್ಥರಾದರು. ಅಂತಹವರಲ್ಲಿ ಭೈಯ್ಯಾ ಗಣಪತರಾವ್, ಶ್ಯಾಮಲಾಲ ಖತ್ರಿ, ಉಸ್ತಾದ ಮೌಜುದ್ದೀನ ಖಾನ್, ಮೊದಲಾದವರು ಪ್ರಮುಖರು. ಈ ಠುಮ್ರಿ ಗಾಯನದ ವಿಚಾರ ಪ್ರಣಾಲಿಗೆ ನೀರೆರೆದು ಪೋಷಿಸಿದರು. ಹೀಗಾಗಿ ಆಧುನಿಕ ಕಾಲದಲ್ಲಿ ಕೇವಲ ಬೋಲ್ ಬನಾವೋಂಕಿ ಠುಮ್ರಿ ಶೈಲಿಯು ಉಳಿದು ಬೆಳೆದುಕೊಂಡು ಬರುವಂತಾಯಿತಲ್ಲದೇ ಠುಮ್ರಿಯ ಈ ವಿಚಾರಧಾರೆಯು ಆಧುನಿಕ ಖ್ಯಾಲಗಾಯನ ಶೈಲಿಯಲ್ಲಿ ಒಂದು ಹೊಸ ಮನ್ವಂತರವನ್ನೇ ಹಾಡಿತು ರಾಗದ ಭಾವರಸಾಭಿವ್ಯಕ್ತಿಯಲ್ಲಿ ಠುಮ್ರಿಯ ಅಂಗವು ವಿಶೇಷ ರೀತಿಯಲ್ಲಿ ಒಂದು ಪರಿಣಾಮಕಾರಿ ಸಹಕಾರಿ ಅಂಗವಾಗಿ ಬೆಳೆದುಕೊಂಡು ಬಂದಿತಲ್ಲದೆ ಸ್ವರ ಪ್ರಧಾನವಾದ ತಂತುವಾದ್ಯದಲ್ಲಿಯೂ ಕೂಡ ಠುಮ್ರಿಯು ವಿಶೇಷವಾಗಿ ಪ್ರಚಾರದಲ್ಲಿ ಬಂದು ಒಂದು ಜನಪ್ರಿಯ ಸಂಗೀತ ಶೈಲಿಯಾಯಿತು. ತಮ್ಮ ಸಂಗೀತ ಕಛೇರಿಗಳಲ್ಲಿ ಕೊನೆಯಲ್ಲಿ ಠುಮ್ರಿಯನ್ನು ಹಾಡುವುದು. ತಮ್ಮ ಕಲಾ ಪೌಢಿಮೆಗೊಂದು ಮೆರಗೆಂದು ಸಂಗೀತಗಾರರು ಭಾವಿಸತೊಡಗಿದರು. ತತ್ಪರಿಣಾಮವಾಗಿ ಠುಮ್ರಿ ಅಂಗದ ಖ್ಯಾಲ, ಟಪ್ಪಾ ಅಂಗದ ಖ್ಯಾಲ ಮೊದಲಾದ ಪ್ರಕಾರಗಳು ಪ್ರಚಾರದಲ್ಲಿ ಬಂದವು.

ಠುಮ್ರಿ ಗಾಯನ ಶೈಲಿಯಲ್ಲಿ ಉಸ್ತಾದೊಂಕಿ ಠುಮ್ರಿ ಎಂಬ ಇನ್ನೂ ಒಂದು ಪ್ರಕಾರವನ್ನು ಕುರಿತು ನಾವು ಕೇಳುತ್ತೇವೆ ಇದು ಬೋಲ್ ಬಾಂಟಕಿ ಠುಮ್ರಿಯಂತೆಯೇ ಇದ್ದರೂ ಸಾಮಾನ್ಯವಾಗಿ ಇದನ್ನು ಠುಮ್ರಿ ಎಂದು ಗುರುತಿಸುವುದಿಲ್ಲ " ಪಹಾಡಿ" ಎಂದು ಗುರುತಿಸಲ್ಪಡುತ್ತಿದೆ. ೪೦-೫೦ ವರುಷಗಳ ಪೂರ್ವದಲ್ಲಿ ಒಂದು ಸಂಗೀತ ಶೈಲಿಯ ಪ್ರಚಾರದಲ್ಲಿ ಬಂದು ಇಂದು ಅದನ್ನು ಪಂಜಾಬಿ ಠುಮ್ರಿ ಎಂದು ಗುರುತಿಸುತ್ತಾರೆ. ಆದರೆ ಸಾಮಾನ್ಯ ಠುಮ್ರಿಯ ಸ್ವರ ಲಯಗಳ ನೆಗೆತದ ಮಾದಕತೆಯ ಸೊಗಸು ಈ ಠುಮ್ರಿಯಲ್ಲಿ ಕಂಡು ಬರುವುದಿಲ್ಲವಾದರೂ ಇದು ಠುಮ್ರಿ ಸಂಗೀತದ ಕಾವ್ಯ ರಚನೆಯ ಶಬ್ದಗಳನ್ನು ಒಳಗೊಂಡಿರುತ್ತದೆ. ಒಂದು ರೀತಿಯಿಂದ ಈ ಶೈಲಿಯು ಗಝಲ್, ಖವ್ವಾಲಿ ಶೈಲಿಗಳಿಗೆ ತೀರ ಸಮೀಪವಾದ ಒಂದು ಸಂಗೀತ ಶೈಲಿಯಾಗಿದೆ. ಸ್ವರ್ಗೀಯ ಉಸ್ತಾದ ಬಡೇಗುಲಾಂ ಅಲಿಖಾನ್ ಮತ್ತು ಬರಕತ್ ಅಲಿ ಖಾನ್ ಅವರು ಪಂಜಾಬಿ ಅಂಗದ ಠುಮ್ರಿಯಲ್ಲಿ ಸುಪ್ರಸಿದ್ಧ ಗಾಯಕರಾಗಿದ್ದರು.

ಇದರ ಜೊತೆಗೆ ಪೂರಬ ಅಂಗ, ದಿಲ್ಲಿ ಅಂಗ, ಲಖನೋ ಅಂಗದ ಠುಮ್ರಿಯ ಪ್ರಕಾರಗಳು ಪ್ರಚಾರದಲ್ಲಿದ್ದು ಭಯ್ಯಾ ಮೌಜುದ್ದೀನ ಖಾನ್ ಮತ್ತು ಉಸ್ತಾದ ಅಬ್ದುಲ್ ಕರೀಂ ಖಾನ್ ಅವರು ಪೂರಬ ಅಂಗದ ಠುಮ್ರಿಯ ಹೆಸರಾಂತ ಗಾಯಕರಾಗಿದ್ದಾರೆ. ದಿಲ್ಲಿ ಠುಮ್ರಿಯ ಪ್ರಕಾರದಲ್ಲಿ ಗುಟ್ಟುಗೋಪಾಲನು ಅದ್ವಿತೀಯ ಸಂಗೀತಗಾರನಾಗಿದ್ದನೆಂದು ತಿಳಿದು ಬರುತ್ತದೆ.

ಠುಮ್ರಿ ಗಾಯನ ಶೈಲಿಯು ಶೃಂಗಾರ ರಸ ಪರಿಪೂರ್ಣವಾಗಿ ಭಾವನಾ ಪ್ರಧಾನವಾದ ಶೈಲಿಯಾಗಿದೆ. ಖ್ಯಾಲ ಗಾಯನಕ್ಕಿಂತ ಠುಮ್ರಿ ಗಾಯನದಲ್ಲಿ ಶಾಸ್ತ್ರದ ಬಿಗಿ-ಬಂಧಗಳು ಅಷ್ಟೊಂದು ಕಟ್ಟು-ನಿಟ್ಟಾಗಿರದೆ ಠುಮ್ರಿ ಗಾಯನ ಶೈಲಿಯ ನಿಯಮ ನಿಯಂತ್ರಣಗಳು ಬಾಹ್ಯದಲ್ಲಿ ಸುಲಭ ಸಾಧ್ಯವೆಂದು ಕಂಡುಬಂದರೂ , ಈ ಗಾಯನ ಶೈಲಿಯ ಲಾಲಿತ್ಯ ಪೂರ್ಣವಾದ ಸ್ವರಗಳ ತರಂಗ ಮಾಲೆಯನ್ನು ನೇಯುವುದು ಸಂಗೀತ ಕಲೆಯಲ್ಲಿ ಪರಿಣಿತ ಕಲಾವಿದರಿಗೆ ಮಾತ್ರ ಸಾಧ್ಯವಾಗಿದೆ. ಠುಮ್ರಿ ಗಾಯನವು ಮೂಲತ: ಭಾವನಾ ಪ್ರಧಾನವಾದುದರಿಂದ ಈ ಗಾಯನ ಶೈಲಿಯಲ್ಲಿ ಶೃಂಗಾರ ಮತ್ತು ಕರುಣ ರಸಗಳು ಪ್ರಧಾನ ರಸಗಳಾಗಿವೆ.

ಠುಮ್ರಿ ಗಾಯನ ಶೈಲಿಯು ಶೋರಿ ಮನೆತನದ " ಗುಲಾಮ ನಬಿ" ಅವರಿಂದ ಅವಿಷ್ಕಾರಗೊಂಡು ಅದು ಲಖನೋದ ವಝೀರ ಅಲಿ ಶಹನ ದರಬಾರಿನಲ್ಲಿ ವಿಶೇಷ ಪ್ರಚಾರವನ್ನು ಹೊಂದಿ ಪ್ರಸಿದ್ಧಿಪಡೆಯಿತೆಂದು ಅಭಿಪ್ರಾಯವು ಜನ ಸಾಮಾನ್ಯವಾಗಿದೆ. ಮಹಾ ಕವಿ ಕಾಳಿದಾಸನ ಕಾಲಕ್ಕೆ ೨೦೦ ವರುಷಗಳ ಪೂರ್ವದಲ್ಲಿಯೇ ಈ ಶೈಲಿಯ ಮೂಲವು ಪರಿಶುದ್ಧ ಭಾರತೀಯ ಸಂಸ್ಕೃತಿಯ ಮೂಲವನ್ನು ಹೊಂದಿದೆ. ಮುಸಲ್ಮಾನ ಆಳರಸರ ಕಾಲಕ್ಕೆ ಗಝಲ್, ಖವ್ವಾಲಿ ಸಂಗೀತ ಶೈಲಿಯ ಗಾಯಕರು ಭಾರತೀಯ ಸಂಸ್ಕೃತಿಯ ಮೂಲವನ್ನು ಹೊಂದಿದ ಈ ಠುಮ್ರಿ ಸಂಗೀತ ಶೈಲಿಯನ್ನು ಎತ್ತಿ ಹಿಡಿದು ಪ್ರೋತ್ಸಾಯಿಸುತ್ತಾ ಬಂದು ಕೊನೆಗೆ ಅದು ತಮ್ಮದೆಂದು ಅಭಿಪ್ರಾಯವನ್ನು ಪ್ರಚಾರ ಮಾಡಿದರು. ಆದರೆ ಆಧುನಿಕ ಠುಮ್ರಿ ಸಂಗೀತವನ್ನು ಪರಿಪೋಷಿಸಿ ಅದನ್ನ ಬೆಳೆಸಿಕೊಂಡು ಬಂದ ಶ್ರೇಯಸ್ಸು ಮಾತ್ರ ಇವರಿಗೇ ಸಲ್ಲುವುದು. ವಝೀದ ಅಲಿ ಶಹನ ದರಬಾರಿನಲ್ಲಿ ಕದರ ಪಿಯಾ ಮತ್ತು ಲಲನ ಪಿಯಾ ಅವರು ಸುಪ್ರಸಿದ್ಧ ಠುಮ್ರಿ ಗಾಯಕರಾಗಿದ್ದರು. ಇದೇ ಸಮಯಕ್ಕೆ ಶ್ರೀಬಂದಾದೀನ ಮಹಾರಾಜರು ಅನೇಕ ಠುಮ್ರಿಗಳನ್ನು ರಚಿಸಿ ಪ್ರಚಾರಮಾಡಿದರು . ಕಳೆದ ೫೦-೬೦ ವರುಷಗಳಲ್ಲಿ ಆಗಿಹೋದ ಸುಪ್ರಸಿದ್ಧ ಠುಮ್ರಿ ಗಾಯಕರಲ್ಲಿ, ಈ ಹಿಂದೆ ಹೇಳಿದಂತೆ ಭಯ್ಯಾ ಗಣಪತರಾವ್, ಮಾಜುದ್ದೀನ್ ಖಾನ್, ಗಿರಿಜಾಬಾಯಿ, ಅಬ್ದುಲ್ ಕರೀಂ ಖಾನ್, ಸೇನೀಜೀ, ಭಯ್ಯಾ ಶ್ಯಮಲಾಲ, ಉಸ್ತಾದ ಬಡೇ ಗುಲಾಂ ಅಲಿ ಖಾನ್, ಶ್ರೀಮತಿ ಸಿದ್ಧೇಶ್ವರಿ ದೇವಿ, ಶ್ರೀಮತಿ ಬಡೀಮಾತಿಬಾಯಿ, ಶ್ರೀಮತಿ ರಸೂಲನಬಾಯಿ, ಶ್ರೀಮತಿ ಬೇಗಂ ಅಖ್ತರ, ಶ್ರೀಮತಿ ಗಿರಿಜಾದೇವಿ, ಶ್ರೀ ಸುರೇಶ ಬಾಬೂಮಾನೆ ಶೋಭಾಗುರ್ಟು, ಮೊದಲಾದವರು ಸುಪ್ರಸಿದ್ಧ ಠುಮ್ರಿ ಗಾಯಕರಾಗಿದ್ದಾರೆ.

ಠುಮ್ರಿಯನ್ನು ಹಾಡುವುದು ಎಲ್ಲ ಸಂಗೀತಗಾರರಿಂದು ಸಾಧ್ಯವಿಲ್ಲ. ಸ್ವರ, ಶಬ್ದಾರ್ಥಗಳ ಮಾರ್ಮಿಕತೆಯನ್ನರಿತ, ವಿಶೇಷ ರೀತಿಯ ಸ್ವರಸಾಧನೆಯನ್ನು ಮಾಡಿ ವಿವಿಧ ರಸ ಭಾವಗಳನ್ನು ಸಹಜವಾಗಿ ನಿರಾಯಸವಾಗಿ ಸ್ವರ, ಲಯಗಳ ತಕ್ಕಡಿಯಲ್ಲಿ ತೂರುವ ಸಮರ್ಥಶೀಲ ಸಂಗೀತಗಾರನಿಗೆ ಮಾತ್ರ ಇದು ಸಾಧ್ಯವಾಗಿದೆ.

**ಆಧರಿಸಿದ ಗ್ರಂಥಗಳು: (References)**


1. ಭಾರತೀಯ ಸಂಗೀತ Vol. No. 1
2. A Quarter on Music - Nove 1992, i vol.
3. ಶ್ರೀ N.N. ಶುಕ್ಲ ಅವರ " ಠುಮ್ರಿ"ಯ ಬಗೆಗಿನ ಲೇಖನ
4. ಪ್ರೋ A.U. ಪಾಟೀಲರ ಮಾರ್ಗದರ್ಶನ